ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯು : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE: 19/2/20

ವಾಗ್ಬಾಣ ಲೆಹರ್ ಸಿಂಗ್ ಹೇಳಿಕೆ । ಪರಿಷತ್ತಲ್ಲಿ ಕುತೂಹಲಕರ ಚರ್ಚೆ

# ಸರ್ಕಾರ ಬೀಳಿಸಿದ 17 ಶಾಸಕರ ಫೋಟೋಕ್ಕೆ ಪೂಜೆ ಮಾಡ್ಬೇಕು!

• **ಕನ್ನಡಪ್ರಭ ವಾರ್ತೆ** ವಿಧಾನ ಪರಿಷತ್

ಒಂದೂವರೆವರ್ಷದಅಪವಿತ್ರಸರ್ಕಾರಬೀಳಲುಕಾರಣರಾದಎಲ್ಲಾ17 ಶಾಸಕರಫೋಟೋಇಟ್ಟುಹೂವಿನಹಾರ ಹಾಕಿ ಪೂಜೆ ಮಾಡಬೇಕು ಎಂಬ ಬಿಜೆಪಿ ಸದಸ್ಯ ಲೆಹರ್ ಸಿಂಗ್ ನೀಡಿದಹೇಳಿಕೆಸದನದಲ್ಲಿಕುತೂಹಲಕರಚರ್ಚೆಗೆ ನಾಂದಿ ಹಾಡಿತು.

ಭೋಜನವಿರಾಮದನಂತರಪರಿಷತ್ ಕಲಾಪಸಮಾವೇಶಗೊಂಡವೇಳೆಮಾತನಾಡಿದಲೆಹರ್‌ಸಿಂಗ್ ಅವರು, ಹಿಂದಿನ ಅಪವಿತ್ರ ಸರ್ಕಾರ ಬೀಳಲು 17 ಶಾಸಕರ ರಾಜೀನಾಮೆ ಕಾರಣ. ಆದ್ದರಿಂದಅವರಫೋಟೋಇಟ್ಟುಪೂಜೆ ಮಾಡಿ ಅಭಿನಂದಿಸಬೇಕು ಎಂದು ಹೇಳಿದರು. ಇದಕ್ಕೆ ಪ್ರತಿಪಕ್ಷದಸದಸ್ಯರುತೀವ್ರಆಕ್ರೋಶವ್ಯಕ್ತಪಡಿಸಿ, ಬಿಜೆಪಿ ಸರ್ಕಾರದಿಂದ ಯಾವುದೇ ಸಾಧನೆಯಾಗಿಲ್ಲ. ಶಾಸಕರ ಮೇಲೆ ಆಪರೇಷನ್ ನಡೆಸಿ, ರಾಜೀನಾಮೆ ಕೊಡುವಂತೆ ಮಾಡಿ ಅಕ್ರಮವಾಗಿ ಅಧಿಕಾರಕ್ಕೆ ಬಂದದ್ದನ್ನು ಹೊಗಳಲು ನಾಚಿಕೆ ಆಗುವುದಿಲ್ಲವೇ ಎಂದು ಕಿಡಿಕಾರಿದರು.

ಈ ವೇಳೆ ಮಾತನಾಡಿದ ಪರಿಷತ್ ವಿಪಕ್ಷದ ನಾಯಕ ಎಸ್.ಆರ್. ಪಾಟೀಲ್ ಅವರು, ಜೀವಂತವಿದ್ದವರ ಫೋಟೋಗೆ ಹೂಹಾರ ಹಾಕಿ ಪೂಜೆ ಮಾಡಿದರೆ ನಮ್ಮಲ್ಲಿ ಬೇರೆಯೇಅರ್ಥಬರುತ್ತದೆಎಂದುಲೇವಡಿಮಾಡಿದರು. ಇದಕ್ಕೆಕ್ಯಾರೆಎನ್ನದಲೆಹರ್‌ಸಿಂಗ್, ಕಾಂಗ್ರೆಸ್, ಜೆಡಿಎಸ್ ಸದಸ್ಯರು ಇನ್ನು ಮುಂದೆ ಪ್ರತಿಪಕ್ಷದಲ್ಲಿ ಕೂರುವುದನ್ನು ರೂಢಿಸಿಕೊಳ್ಳಬೇಕು. ಮುಂದಿನ ಮೂರು ವರ್ಷ ಯಡಿಯೂರಪ್ಪಅವರಸರ್ಕಾರಭದ್ರವಾಗಿಇರಲಿದೆ. ಆ ನಂತರವೂ ಕೂಡ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ಬಿಜೆಪಿಯೇ ಅಧಿಕಾರಕ್ಕೆ ಬರಲಿದೆ ಎಂದರು.


ಮೇಲ್ಮನೆಯಲ್ಲಿ ಸುರೇಶ್ ಕುಮಾರ್ ಜತೆ ಲೆಹರ್ ಸಿಂಗ್